ಕೊಟ್ಟೂರು ರೈಲ್ವೆ ಲೈನನ್ನು ಹರಿಹರದವರೆಗೆ ವಿಸ್ತರಿಸುವ ಬಗ್ಗೆ

೩೬೫ (೧೫೪) ಶ್ರೀ ಬಿ. ಪೆಚ್. ವೆಂಕಾನಾಯಕ್ (ಹರಪನಹಳ್ಳಿ).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ :—

ಹೊಸಪೇಟೆ–ಕೊಟ್ಟೂರು ರೈಲು ಮಾರ್ಗವನ್ನು ಹರಿಹರದವರೆಗೆ ವಿಸ್ತರಿಸುವ ಬಗ್ಗೆ ಕೇಂದ್ರ ಸರ್ಕಾರದವರ ಒತ್ತಡ ತರಲು ಸರ್ಕಾರದವರು ಕೈಕೊಂಡ ಕ್ರಮವೇನು ?

ಶ್ರೀ ಪೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಈವರೆವಿಗೂ ಸರ್ಕಾರಕ್ಕೆ ಸಾರ್ವಜನಿಕರಿಂದಾಗಲೀ, ಸಂಘ ಸಂಸ್ಥೆಗಳಿಂದಾಗಲೀ, ಹೊಸಪೇಟೆ–ಕೊಟ್ಟೂರು ರೈಲು ಮಾರ್ಗವನ್ನು ಹರಿಹರದವರೆಗೆ ವಿಸ್ತರಿಸುವ ಬಗ್ಗೆ ಯಾವ ಮನವಿ ಪತ್ರಗಳಾಗಲೀ? ಅಥವಾ ಕೋರಿಕೆಗಳಾಗಲೀ ಬರದೇ ಇರುವ ಪ್ರಯುಕ್ತ ರಾಜ್ಯ ಸರ್ಕಾರವು ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಬರೆದಿರುವುದಿಲ್ಲ.

ಶ್ರೀ ಪೆಚ್. ಡಿ. ದೇವೇಗೌಡ.— ಅಧ್ಯಕ್ಷರೇ, ಇದರ ಜೊತೆಗೆ ಇನ್ನೊಂದು ವಿಷಯವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುವುದೇನೆಂದರೆ, ಇದರ ಬಗ್ಗೆ ಪರಿಶೀಲನೆ ಮಾಡಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸನ್ನು ಕಳುಹಿಸಿಕೊಡುತ್ತಿದ್ದೇವೆ.

ಶ್ರೀ ಬಿ.ಪೆಚ್. ವೆಂಕಾನಾಯಕ್.— ತಾವು ಯಾವ ಸಂಘ ಸಂಸ್ಥೆಗಳಿಂದ ಮನವಿ ಬಂದಿಲ್ಲವೆಂದ ಹೇಳಿದ್ದೀರಿ, ಆದರೆ ಆಳ ಪಂಚಾಯಿತಿಗಳವರು ಮತ್ತು ತಾಲ್ಲೂಕ್ ಬೋರ್ಡಿನವರು ಬಹಳ ಹಿಂದೆಯೇ ಇದರ ಬಗ್ಗೆ ರೆಜಲ್ಯೂಷನ್ ಪಾಸ್ ಮಾಡಿ ಕಳುಹಿಸಿಕೊಟ್ಟಿದ್ದಾರೆ. ಅದರ ಬಗ್ಗೆ ಪರಿಶೀಲನೆ ಮಾಡುತ್ತೀರಾ?

ಶ್ರೀ ಪೆಚ್. ಡಿ. ದೇವೇಗೌಡ.— ನನಗೆ ಬಂದಿರತಕ್ಕ ವರದಿ ಆಧಾರದ ಮೇಲೆ ಉತ್ತರ ಕೊಡುತ್ತಿದ್ದೇನೆ. ಸಾರ್ವಜನಿಕರಿಂದ ಮತ್ತು ಆಳ ಪಂಚಾಯಿತಿಗಳವರಿಂದ ಮನವಿ ಸರ್ಕಾರಕ್ಕೆ ಬಂದಿದೆಯೆಂದು ಹೇಳುತ್ತಿದ್ದಾರೆ ಅದರ ಬಗ್ಗೆ ಪುನಃ ರಿಕಾರ್ಡ್ ತರಿಸಿ ನೋಡುತ್ತೇವೆ. ಆದರೆ ಇವರ ಪ್ರಶ್ನೆ ಬಂದ ಕೂಡಲೇ ನಾನು ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಫೀಜಿಬಿಲಿಟಿ ಸರ್ವೆ ಮಾಡತಕ್ಕದರ ಬಗ್ಗೆ ಕೇಂದ್ರ ಸರ್ಕಾರದವರಲ್ಲಿ ಈಗಾಗಲೇ ವಿನಂತಿ ಮಾಡಿಕೊಂಡಿದ್ದೇವೆ, ಮತ್ತು ಇದರ ಬಗ್ಗೆ ಕೇಂದ್ರ ಸರ್ಕಾರದವರ ಮೇಲೆ ಒತ್ತಾಯ ತರತಕ್ಕಂಥ ಪ್ರಯತ್ನವನ್ನೂ ಸಹ ಮಾಡುತ್ತೇವೆ.

ಶ್ರೀ ಕೆ. ಮಲ್ಲಪ್ಪ.— ಸ್ವಾಮಿ, ಹಿಂದೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಶ್ರೀ ಕೆ. ಸಿ.ರೆಡ್ಡಿಯವರು ಮತ್ತು ಶ್ರೀ ಕೆಂಗಲ್ ಹನುಮಂತಯ್ಯನವರು ಆ ಭಾಗಕ್ಕೆ ಪ್ರವಾಸ ಬಂದಿದ್ದ ಕಾಲದಲ್ಲಿ ಸರ್ವೆ ಮಾಡಿಸುತ್ತೇವೆಂದು ಹೇಳಿದ್ದರು. ಆದುದರಿಂದ ಸರ್ಕಾರದ ಹತ್ತಿರ ದಾಖಲೆಗಳು ಇರಬೇಕು ಇದರ ಬಗ್ಗೆ ಮಾನ್ಯ ಸಚಿವರು ಪರಿಶೀಲನೆ ಮಾಡಬಹುದು.

ಶ್ರೀ ಪೆಚ್.ಡಿ. ದೇವೇಗೌಡ.— ಬಹಳ ಜಾಗ್ರತೆಯಿಂದ ಹುಡುಕಿಸಿ ನೋಡುತ್ತೇನೆ.

ಒಬ್ಬ ಸದಸ್ಯರು.— ಬರೀ ರೈಲು ಬಿಡುತ್ತಿದ್ದಾರೆ.

ಅಧ್ಯಕ್ಷರು.— ಸದ್ಯಕ್ಕೆ ರೈಲು ಬಿಟ್ಟಿದ್ದಾರೆ ಆಮೇಲೆ ನೋಡೋಣ.

ಕಟ್ಟಡಗಳ ನಿರ್ಮಾಣಕ್ಕೆ ಮರಮುಟ್ಟುಗಳ ಕೊರತೆ

೩೬೬ (೧೫೬) ಶ್ರೀ ಕೆ. ಮಲ್ಲಪ್ಪ (ಹರಿಹರ).— ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ಗುಡ್ಡಗಳನ್ನು ಸಹ ಅರಣ್ಯ ಪ್ರದೇಶ ಎಂದು ಸಾರಿ ಬರೀ ನೀಲಗಿರಿ ಮರ ಬೆಳೆಯಲು ಕಾರಣಗಳೇನು ? ಬೇರೆ ಜಾತಿಯ ಮರಗಳನ್ನು ಬೆಳೆಯದೇ ಹೋದಲ್ಲಿ ಮುಂದೆ ಕಟ್ಟಡಗಳಿಗೆ ಬೇಕಾಗುವ ಮರಮುಟ್ಟುಗಳ ಅಭಾವ ತಲೆದೋರುವುದಿಲ್ಲವೆ? ಉರುವಲು ಕಟ್ಟಿಗೆಗೆ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?